

ಎಸೆಯುತ್ತಾರೆ. ಇದನ್ನೆಲ್ಲ ಸಂಗ್ರಹಿಸಿಟ್ಟುಕೊಂಡು ಬಣ್ಣ ಬಣ್ಣದ ಸ್ಕ್ರಂಚಿಗಳನ್ನು ತಯಾರಿಸಬಹುದು. ಈ ತರಹದ ಹೇರ್‌ಬ್ಯಾಂಡ್‌ಗಳನ್ನು ತಯಾರಿಸುವುದು ತುಂಬಾ ಸುಲಭ. ನಿಮ್ಮ ಉಡುಪಿನ ಜೊತೆಗೆ ಹೇರ್‌ಬ್ಯಾಂಡ್ ಕೂಡ ಮ್ಯಾಚ್ ಮಾಡಬೇಕೆನಿಸಿದರೆ ನೀವು ಧರಿಸುವ ಉಡುಪಿನ ಸ್ವಲ್ಪ ಬಟ್ಟೆ ಇದ್ದರೆ ಸಾಕು, ಅದನ್ನೇ ಉದ್ದವಾಗಿ ಕತ್ತರಿಸಿ ಎರಡು ಬದಿಯನ್ನು ಸೇರಿಸಿ ಉದ್ದಕ್ಕೆ ಹೊಲಿದುಕೊಳ್ಳಿ. ಇದರ ಮಧ್ಯೆ ಎಲಾಸ್ಟಿಕ್ ತೂರಿಸಿ ಗಂಟು ಹಾಕಿದರೆ ಸಾಕು. ಉಡುಪಿಗೆ ಮ್ಯಾಚ್ ಆಗುವ ಸ್ಕ್ರಂಚಿ ಸಿದ್ಧ. ಇದೇ ರೀತಿ ಅಗಲವಾದ ಬಟ್ಟೆ ಇದ್ದರೆ ತುಂಬು ನೆರಿಗೆಯ ಸ್ಕ್ರಂಚಿ ತಯಾರಿಸಬಹುದು. ಬಟ್ಟೆ ಕಡಿಮೆಯಿದ್ದರೆ ಸಪೂರವಾಗಿ ತಯಾರಿಸಬಹುದು. ಎರಡುಮೂರು ಬಟ್ಟೆ ಸೇರಿಸಿ ಮಿಕ್ಸ್ ಮ್ಯಾಚ್ ಮಾಡಿ ಹೊಲಿಯಬಹುದು. ಈ ಸ್ಕ್ರಂಚಿಗಳಿಗೆ ನಿಮಗಿಷ್ಟವಾದ ವಿವಿಧ ವಿನ್ಯಾಸದ ಮುತ್ತು, ಮಣಿ, ಬೆಳ್ಳಿ, ಚಿನ್ನ, ಬ್ಲಾಕ್ ಮೆಟಲ್‌ನ ವಿವಿಧ ವಿನ್ಯಾಸದ ಮೆಟಲ್ ಪೀಸ್‌ಗಳು, ಕಲರ್‌ಫುಲ್ ಹ್ಯಾಂಗಿಂಗ್ಸ್, ಮರದಿಂದ ತಯಾರಿಸಿದ ವಿವಿಧ ವಿನ್ಯಾಸದ ಆಲಂಕಾರಿಕ ವಸ್ತುಗಳನ್ನು ಅಳವಡಿಸಿ ಇನ್ನೂ ಸುಂದರವಾಗಿ ತಯಾರಿಸಬಹುದು.

ವೆಲ್ವೆಟ್ ಬಟ್ಟೆಯಿಂದ ತಯಾರಿಸಲಾದ ಸ್ಕ್ರಂಚಿಗಳು ಹೆಚ್ಚು ಆಕರ್ಷಕವಾಗಿದ್ದು ಇವು ಯುವತಿಯರಿಗೆ ಆಧುನಿಕ ಲುಕ್ ಕೊಡಲು ಸಹಕಾರಿ. ಅದರಲ್ಲೂ ಬೋ ವಿನ್ಯಾಸದ ಸ್ಕ್ರಂಚಿಗಳು ಯುವತಿಯರ ಹಾಟ್ ಫೇವರೆಟ್ ಎಂತಲೇ ಹೇಳಬಹುದು. ಇವನ್ನು ಮಾಡರ್ನ್ ಉಡುಪುಗಳ ಜೊತೆ ಮ್ಯಾಚ್ ಮಾಡಿ ಧರಿಸಬಹುದು. ಸಭೆ ಸಮಾರಂಭಗಳಿಗೆ ಹೋಗುವಾಗ ಗ್ರ್ಯಾಂಡ್ ಲುಕ್ ನೀಡುವ ಲೇಸ್, ಮಣಿ ಅಳವಡಿಸಿದ ಸ್ಕ್ರಂಚಿ ಧರಿಸಬಹುದು. ಇದನ್ನು ಬಳಸಿದ ಮೇಲೆ ಮಣ್ಣು, ಕೊಳೆ ಆಗಿದ್ದರೆ ಶುಭ್ರವಾಗಿ ತೊಳೆದು ಒಣಗಿಸಿ ಮತ್ತೆ ಬಳಸಬಹುದು.

ಸ್ವಯಂ ಉದ್ಯೋಗ ಮಾಡಬಯಸುವ ಗೃಹಿಣಿಯರು ಮನೆಯಲ್ಲಿ ಉಳಿದಿರುವ ಕಲರ್‌ಫುಲ್ ಬಟ್ಟೆಗಳಿಂದ ಸ್ಕ್ರಂಚಿ ತಯಾರಿಸಿ ಆನ್‌ಲೈನ್ ಮಾರಾಟ ಮಾಡಬಹುದು. ಅಲ್ಲದೆ ಗೆಳತಿಯರಿಗೆ, ಸಂಬಂಧಿಗಳಿಗೆ ಉಡುಗೊರೆ ರೂಪದಲ್ಲಿಯೂ ನೀಡಬಹುದು. ಶುಭ ಸಮಾರಂಭಕ್ಕೆ ಹೋಗುವಾಗ ಗಿಫ್ಟ್ ಪ್ಯಾಕ್ ಮೇಲೆ ಈ ತರಹದ ಸ್ಕ್ರಂಚಿ ಅಳವಡಿಸಿ ಕೊಟ್ಟರೆ ನೀವು ಕೊಡುತ್ತಿರುವ ಗಿಫ್ಟ್ ಬಾಕ್ಸ್ ಇನ್ನೂ ಆಕರ್ಷಕವಾಗಿ ಕಾಣುತ್ತದೆ. ಆಕರ್ಷಕವಾಗಿರುವ ಒಂದೇ ತರಹದ ಸ್ಕಂಚಿಗಳನ್ನು ಕೂದಲಿಗೂ ಹಾಗೂ ಕೈಗಳಿಗೂ ತೊಡಬಹುದು.



## ಸ್ಕ್ರಂಚಿ ವಾಚ್

ಮೊದಲೆಲ್ಲಾ ಬರೀ ಪೋನಿಟೇಲ್‌ಗೆ ಮಾತ್ರ ಬಳಸಲಾಗುತ್ತಿದ್ದ ಸ್ಕ್ರಂಚಿಗಳು ಇದೀಗ ಅದರ ಮುಂದುವರಿದ ಭಾಗವಾಗಿ ಸ್ಕ್ರಂಚಿ ವಾಚ್‌ಗಳ ರೂಪದಲ್ಲಿ ಫ್ಯಾಷನ್ ಲೋಕಕ್ಕೆ ಲಗ್ಗೆ ಇಟ್ಟಿವೆ. ಸಾಮಾನ್ಯ ವಾಚ್‌ಗಳಲ್ಲಿ ಚರ್ಮ ಅಥವಾ ಲೋಹದ ಪಟ್ಟಿಗಳಿದ್ದರೆ ಈ ವಾಚ್‌ಗಳಲ್ಲಿ ಬಟ್ಟೆಯಿಂದ ಮಾಡಿದ ಎಲಾಸ್ಟಿಕ್ ಪಟ್ಟಿ ಇರುತ್ತದೆ. ಸಾಮಾನ್ಯವಾಗಿ ಸಿನಿಮಾ ಮತ್ತು ಮಾಡೆಲಿಂಗ್ ಕ್ಷೇತ್ರಗಳ ಸೆಲೆಬ್ರಿಟಿಗಳು ಮತ್ತು ಸೋಷಿಯಲ್ ಮೀಡಿಯಾದಲ್ಲಿ ಸಕ್ರಿಯರಾಗಿರುವ ಸೆಲೆಬ್ರಿಟಿಗಳು ಈ ಸ್ಕ್ರಂಚಿ ಸ್ಟೈಲ್ ಅನ್ನು ಮುನ್ನೆಲೆಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಬಾಲಿವುಡ್ ತಾರೆಯರಾದ ಜಾಹ್ನವಿ ಕಪೂರ್, ಸಾರಾ ಅಲಿ ಖಾನ್, ಕರೀನಾ ಕಪೂರ್ ಸ್ಕ್ರಂಚಿ ವಾಚುಗಳನ್ನು ಧರಿಸಿದ ಫೋಟೊಗಳನ್ನು ಇನ್‌ಸ್ಟಾನಲ್ಲಿ ಶೇರ್ ಮಾಡಿದಾಗ ಈ ಸ್ಟೈಲ್ ದೊಡ್ಡ ಮಟ್ಟದಲ್ಲಿ ಹಿಟ್ ಆಗಿತ್ತು. ದಕ್ಷಿಣ ಕೊರಿಯಾದ ಫ್ಯಾಷನ್‌ನಲ್ಲಿ ಇದು ಪ್ರಮುಖ ಸ್ಥಾನ ಹೊಂದಿದ್ದು, ಅಲ್ಲಿನ ಪಾಪ್ ತಾರೆಗಳು, ಲೇಸ್ ಹಾಗೂ ರೇಷ್ಮೆ ಬಟ್ಟೆಯ ಸ್ಕ್ರಂಚಿ ವಾಚುಗಳನ್ನು ಧರಿಸಿ ಸಖತ್ತಾಗಿ ಮಿಂಚಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಒಂದು ಹೊಸ ಟ್ರೆಂಡ್ ಅನ್ನೇ ಹುಟ್ಟುಹಾಕಿದೆ. ನೋಡಲು ಅತ್ಯಾಕರ್ಷಕವಾಗಿರುವ ಹಾಗೂ ಧರಿಸಲು ಆರಾಮದಾಯಕವಾಗಿರುವ ಈ ವಾಚ್‌ಗಳು ಇದೀಗ ಬರೀ ಸಮಯ ನೋಡುವ ಸಾಧನವಲ್ಲದೆ ಕೈಗಳ ಅಂದವನ್ನೂ ಇಮ್ಮಡಿಗೊಳಿಸುವ ಸಾಧನವಾಗಿವೆ.

ಕಾಟನ್, ಸಿಲ್ಕ್, ವೆಲ್ವೆಟ್ ಬಟ್ಟೆಗಳ ಜತೆಗೆ ಹೂವಿನ ಚಿತ್ತಾರಗಳಿರುವ ಹತ್ತಾರು ವಿನ್ಯಾಸಗಳಲ್ಲಿ ಸ್ಕ್ರಂಚಿ ವಾಚ್‌ಗಳು ಲಭ್ಯ. ಇದರ ಒಂದು ಪ್ಲಸ್ ಪಾಯಿಂಟ್ ಎಂದರೆ ನೀವು ಧರಿಸುವ ಪ್ರತಿ ಉಡುಪಿನ ಬಣ್ಣಕ್ಕೆ ಇದನ್ನು ಹೊಂದಿಸಬಹುದು. ಇವುಗಳು ಲೋಹದ ಪಟ್ಟಿಗಳಂತೆ ಚರ್ಮಕ್ಕೆ ಚುಚ್ಚುವುದಿಲ್ಲ ಅಥವಾ ಕೈಗೆ ಬಿಗಿಯಾದ ಅನುಭವ ನೀಡುವುದಿಲ್ಲ, ದಿನವಿಡೀ ಧರಿಸಲು ಹಿತವಾಗಿರುವ ಇದು ಆರಾಮದಾಯಕ ಅನುಭವ ನೀಡುತ್ತವೆ. ನೀವು ಧರಿಸುವ ಜೀನ್ಸ್, ಟೀ ಶರ್ಟ್ ಜತೆಗೆ ಫ್ಲೋರಲ್ ಅಥವಾ ಪ್ರಿಂಟೆಡ್ ಸ್ಕ್ರಂಚಿ ವಾಚ್ ಧರಿಸಿದರೆ ಸಖತ್ತಾಗಿ ಕಾಣುತ್ತದೆ.

ಸಾಂಪ್ರದಾಯಿಕ ಉಡುಪುಗಳಾದ ಕುರ್ತಾ ಅಥವಾ ಸೀರೆಗೆ ಸಿಲ್ಕ್ ಅಥವಾ ಜರಿಯ ವಿನ್ಯಾಸವಿರುವ ಸ್ಕ್ರಂಚಿ ವಾಚನ್ನು ಮ್ಯಾಚ್ ಮಾಡಿ ಧರಿಸಬಹುದು.

ಲೇಯರ್ ಬ್ರೇಸ್ಲೆಟ್‌ಗಳ ಜೊತೆಗೆ ಈ ವಾಚ್ ಧರಿಸುವುದು ಈಗಿನ ಹೊಸ ಟ್ರೆಂಡ್. ವಾಚ್ ಮತ್ತು ಕೈಬಳೆ ಎರಡರಂತೆಯೂ ಕಾಣುವುದರಿಂದ ಇಂಥ ವಾಚ್‌ಗಳು ಯುವತಿಯರ ಮನಗೆಲ್ಲುತ್ತಿದೆ.